# ನಹೀ ಜ್ಞಾನೇನ ಸದೃಶಂ



**ಮಲೆನಾಡ ಗಾಂಧಿ ದಿ|| ಹೆಚ್. ಜಿ. ಗೋವಿಂದಗೌಡರು**
**ಮಾಜಿ ಶಿಕ್ಷಣ ಸಚಿವರು**

# ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ) ನಾಗವಲ್ಲಿ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ

## "ಸ್ಥಾಪನೆ ದಿನಾಂಕ : 10–08–1951"

ನಮ್ಮ ಶಾಲೆಯು ದಿನಾಂಕ 10–08–1951 ರಂದು ಅಂದಿನ ರಾಜ್ಯಪಾಲರು, ಮೈಸೂರುಸಂಸ್ಥಾನದ ಮಹಾರಾಜರಾಗಿದ್ದ ಶ್ರೀಮದ್ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರ ಅಮೃತ ಹಸ್ತದಿಂದ ಜಿಲ್ಲಾ ಬೋರ್ಡ್ ಹೈಸ್ಕೂಲ್ ಎಂಬ ಹೆಸರಿನೊಂದಿಗೆ ಶಂಕುಸ್ಥಾಪನೆಯಾಗಿ ಸ್ಥಾಪಿತವಾಗಿದ್ದು, ಶಾಲೆಯು 66 ವಸಂತಗಳನ್ನು ಪೂರೈಸಿರುತ್ತದೆ.

ಶಾಲೆಯ ಸಂಸ್ಥಾಪಕರು, ಮಾಜಿ ಶಾಸಕರು ಆಗಿದ್ದಂತಹ ನಾಗವಲ್ಲಿಯವರೇ ಆದ ಸಹೃದಯಿಗಳೂ ದಾನಿಗಳೂ ಆದ ದಿ॥ ಟಿ.ಎನ್.ಮೂಡಲಗಿರಿಗೌಡರು ಎಲ್ಲರಿಗೂ ವಿದ್ಯೆ ಅಲಭ್ಯವಾಗಿದ್ದಂತಹ ಕಾಲದಲ್ಲಿ ರೈತಾಪಿ ಹಾಗೂ ಗ್ರಾಮೀಣ ಭಾಗದ ಮಕ್ಕಳಿಗೆ ಅನುಕೂಲವಾಗಲೆಂದು ಕಟ್ಟಡ ಕಟ್ಟಿಸಿಕೊಟ್ಟಿದ್ದು ಹಾಗೆಯೇ ನಾಗವಲ್ಲಿಯವರೇ ಆದ ಶ್ರೀ ದೊಡ್ಡೇಗೌಡರ ಮಗ ಶ್ರೀ ಅಂದಾನಯ್ಯನವರು ತಮ್ಮ 5ಎಕರೆ 30 ಕುಂಟೆ ಜಮೀನನ್ನು ದಾನಮಾಡಿ. ಈ ಶಾಲೆಯ ಲಕ್ಷಾಂತರ ಮಕ್ಕಳು ವಿದ್ಯಾವಂತರಾಗಲು ಕಾರಣೀಭೂತರಾಗಿದ್ದಾರೆ.

1950–51ನೇ ಸಾಲಿನಲ್ಲಿ 78 ವಿದ್ಯಾರ್ಥಿಗಳು ದಾಖಲಾಗಿದ್ದು ಕ್ರಮೇಣವಾಗಿ 1963–64ರಲ್ಲಿ 226 ವಿದ್ಯಾರ್ಥಿಗಳು ದಾಖಲಾಗಿ ಶಾಲೆಯಲ್ಲಿ ದಾಖಲಾತಿಯು ಗಣನಿಯವಾಗಿ ಏರಿಕೆಯಾಯಿತು. ಏರಿಕೆಯಾದ ಕಾರಣ 1982–83ರಲ್ಲಿ ಸಂಯುಕ್ತ ಪದವಿ ಪೂರ್ವ ಕಾಲೇಜ್ ಎಂಬುದಾಗಿ ಪರಿವರ್ತನೆಕೊಂಡು ಕಾರ್ಯಾರಂಭವಾಯಿತು. ನಂತರ 2008–09ನೇ ಸಾಲಿನಲ್ಲಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಿಂದ ಪ್ರೌಢ ಶಾಲಾ ವಿಭಾಗ ಎಂಬುದಾಗಿ ಪ್ರತ್ಯೇಕಗೊಂಡು ಉಪಪ್ರಾಂಶುಪಾಲರ ಹುದ್ದೆ ಮಂಜೂರಾಗಿ ಕಾರ್ಯಾರಂಭವಾಯಿತು.

2017–18ನೇ ಸಾಲಿನಲ್ಲಿ ಶಾಲೆಯಲ್ಲಿ 21 ಮಂದಿ ಬೋಧಕ ಸಿಬ್ಬಂದಿ ಹಾಗೂ 05 ಮಂದಿ ಬೋಧಕೇತರ ಸಿಬ್ಬಂದಿ ವರ್ಗದವರು ಕಾರ್ಯನಿರ್ವಹಿಸುತ್ತಿರುತ್ತಾರೆ. ಶಾಲೆಯಲ್ಲಿ 13 ವಿಭಾಗಗಳಿದ್ದು 306 ವಿದ್ಯಾರ್ಥಿಗಳಿದ್ದು 376 ವಿದ್ಯಾರ್ಥಿನಿಯರು ಸೇರಿ ಒಟ್ಟು 682 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ.

ಕಳೆದ ಬಾರಿಯ 2016–17 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ನಮ್ಮ ಶಾಲೆಯು ಶೇ.91% ರಷ್ಟು ಫಲಿತಾಂಶ ಪಡೆದಿದೆ. ಈ ಪರೀಕ್ಷೆಗೆ 208 ವಿದ್ಯಾರ್ಥಿಗಳು ಹಾಜರಿದ್ದು 08 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. 191 ವಿದ್ಯಾರ್ಥಿಗಳು ಉತ್ತೀರ್ಣರಾಗಿರುತ್ತಾರೆ. ಈ ಫಲಿತಾಂಶ ಬರಲು ಕಾರಣರಾದ ಎಸ್.ಡಿ.ಎಂ.ಸಿ ಅಧ್ಯಕ್ಷರು ಹಾಗೂ ತುಮಕೂರು ಗ್ರಾಮಂತರ ಕ್ಷೇತ್ರದ ಸನ್ಮಾನ್ಯ ಶಾಸಕರು ಹಾಗೂ ಎಸ್.ಡಿ.ಎಂ.ಸಿ ಸದಸ್ಯರುಗಳ ಪ್ರೋತ್ಸಾಹ, ಸಹಕಾರವನ್ನು ಮತ್ತು ಉಪಪ್ರಾಚಾರ್ಯರ,ಶಿಕ್ಷಕ ವೃಂದದ ಶ್ರಮವನ್ನು ಸ್ಮರಿಸಬೇಕಾಗುತ್ತದೆ.

ನಮ್ಮ ಶಾಲೆಯ ಬಗ್ಗೆ ಅಪಾರ ಕಾಳಜಿ ಹೊಂದಿರುವ ತುಮಕೂರು ಗ್ರಾಮಾಂತರ ಕ್ಷೇತ್ರದ ಜನಪ್ರಿಯ ಶಾಸಕರಾದ ಸನ್ಮಾನ್ಯ ಶ್ರೀಯುತ ಬಿ. ಸುರೇಶ್‌ಗೌಡರವರು ಶಾಲೆಯನ್ನು ದತ್ತು ತೆಗೆದುಕೊಂಡು ಶಾಲಾ ವಿದ್ಯಾರ್ಥಿಗಳಿಗೆ ಅನುಕೂಲವಾಗಲೆಂದು 10 ಲಕ್ಷರೂ ವೆಚ್ಚದಲ್ಲಿ ಹೈಟೆಕ್ ಗ್ರಂಥಾಲಯ, 2.6 ಲಕ್ಷರೂ ವೆಚ್ಚದಲ್ಲಿ ಗ್ರಂಥಾಲಯಕ್ಕೆ ಪುಸ್ತಕಗಳನ್ನು ಹಾಗೂ ಇ-ಗ್ರಂಥಾಲಯಕ್ಕೆ ಬೇಕಾದ ಇಂಟರ್‌ನೆಟ್ ಹಾಗೂ ವೈ-ಫೈ ಸೌಲಭ್ಯವನ್ನು ಕಲ್ಪಿಸಿಕೊಟ್ಟಿದ್ದಾರೆ.

12.50 ಲಕ್ಷರೂ ವೆಚ್ಚದಲ್ಲಿ ಗಣಕಯಂತ್ರ ಪ್ರಯೋಗಾಲಯ, 12 ಲಕ್ಷರೂ ವೆಚ್ಚದಲ್ಲಿ ವಿಜ್ಞಾನ ಪ್ರಯೋಗಾಲಯ ನಿರ್ಮಿಸಿ ಕೊಟ್ಟಿದ್ದಾರೆ, ಇದಲ್ಲದೆ ಶಾಲೆಯ ಭದ್ರತೆಗಾಗಿ ಸುಮಾರು 65 ಲಕ್ಷರೂ ವೆಚ್ಚದಲ್ಲಿ ಶಾಲೆಯ ಮೈದಾನದ ಸುತ್ತಲೂ ಕಾಂಪೌಡ್, 15 ಲಕ್ಷರೂ ವೆಚ್ಚದಲ್ಲಿ ಸೈಕಲ್ ಸ್ಟ್ಯಾಂಡ್.15 ಲಕ್ಷರೂ ವೆಚ್ಚದಲ್ಲಿ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಹಾಗೂ ಶಿಕ್ಷಕರಿಗೆ ಹೈಟೆಕ್ ಶೌಚಾಲಯವನ್ನು ನಿರ್ಮಿಸಿ ಕೊಟ್ಟಿರುತ್ತಾರೆ ಇದರ ಜೊತೆಗೆ 2016-17ನೇ ಸಾಲಿನಲ್ಲಿ 10 ಲಕ್ಷರೂ ವೆಚ್ಚದಲ್ಲಿ ವಿದ್ಯಾರ್ಥಿನಿಯರಿಗೆ ಹೈಟೆಕ್ ಶೌಚಾಲಯವನ್ನು ನಿರ್ಮಿಸಿ ಕೊಟ್ಟಿರುತ್ತಾರೆ. ದಿನಾಂಕ 11.02.2017 ರಂದು ಉದ್ಘಾಟಿಸಲಾಗಿದೆ.

ವಿದ್ಯಾರ್ಥಿಗಳಿಗಾಗಿ ಸುಮಾರು 5 ಲಕ್ಷರೂ ವೆಚ್ಚದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ನಿರ್ಮಿಸಲಾಗಿದೆ. ಇದರ ಬಳಕೆಯಿಂದ ನಮ್ಮ ಶಾಲೆಯ ಮಕ್ಕಳ ಆರೋಗ್ಯವು ಸುಧಾರಿಸಿದ್ದು ಗೈರುಹಾಜರಿ ಪ್ರಮಾಣ ಗಣನೀಯವಾಗಿ ಕಡಿಮೆಯಾಗಿದೆ. ಹಾಗೂ 10 ಲಕ್ಷರೂ ವೆಚ್ಚದಲ್ಲಿ ಶಾಲೆಯ ಎಲ್ಲಾ ಕೊಠಡಿಗಳಿಗೆ ಹಾಗೂ ಶಾಲಾ ಆವರಣದ ಕಾಂಪೌಡ್‌ಗೆ ಪೈಂಟಿಂಗ್ ಮಾಡಿಸಿದ್ದು ಶಾಲೆಯ ಅಂದವನ್ನು ಹೆಚ್ಚಿಸಿ ಈ ಮೂಲಕ ಸ್ವಚ್ಛ ಶೈಕ್ಷಣಿಕ ಪರಿಸರವನ್ನು ಸೃಷ್ಟಿಸಿದೆ. ಇದಲ್ಲದೇ ಪ್ರಸ್ತುತ ಸುಮಾರು 22 ಲಕ್ಷರೂ ವೆಚ್ಚದಲ್ಲಿ ರಾಜ್ಯಸಭಾ ಸದಸ್ಯರಾದ ಮಾನ್ಯ ಶ್ರೀ ವೆಂಕಯ್ಯನಾಯ್ಡುರವರ ಅನುದಾನದಲ್ಲಿ 02 ಬೋಧನಾ ಕೊಠಡಿಗಳು ಇದರ ಜೊತೆಗೆ ಇಲಾಖೆಯಿಂದ ಮಂಜೂರಾದ 6 ಲಕ್ಷರೂ ಜೊತೆಗೆ 5 ಲಕ್ಷರೂ ಸೇರಿಸಿ 01 ಬೋಧನಾ ಕೊಠಡಿ ನಿರ್ಮಿಸಲಾಗಿದೆ ಇದಲ್ಲದೇ ನಮ್ಮ ಶಾಲಾ ಕಾಂಪೌಡ್‌ನಲ್ಲಿರುವ ಹಾಸ್ಟೆಲ್‌ನ ಹಳೇ ಕಟ್ಟಡವನ್ನು ಸುಮಾರು 20 ಲಕ್ಷರೂ ವೆಚ್ಚದಲ್ಲಿ ನವೀಕರಣಗೊಳಿಸಲಾಗಿದೆ. ಅದರಲ್ಲಿ ಒಂದು ಹೈಟೆಕ್ ಅಡುಗೆಕೋಣೆ, ದಾಸ್ತಾನುಕೊಠಡಿ, ಡೈನಿಂಗ್‌ಹಾಲ್ ಒಳಗೊಂಡಂತೆ 5 ಕೊಠಡಿಗಳನ್ನು ನವೀಕರಿಸಲಾಗಿದೆ. ಅದಲ್ಲದೆ ಕ್ರೀಡಾ ಕೊಠಡಿ, 5 ಹೊಲಿಗೆ ಕೊಠಡಿಗಳನ್ನೊಳಗೊಂಡಂತೆ 12 ಕೌಶಲ ಬೋಧನಾ ಕೊಠಡಿಗಳನ್ನು ನವೀಕರಿಸಲಾಗಿದೆ. ಮಕ್ಕಳಿಗೆ ಅನುಕೂಲವಾಗಲೆಂದು ಸ್ಟೇಷನರಿ ಅಂಗಡಿ ತೆರೆಯಲಾಗಿದೆ. ಹಾಗೆಯೇ ಸುಮಾರು 70,000ರೂ ವೆಚ್ಚದಲ್ಲಿ Smart class ನಿರ್ಮಿಸಲಾಗಿದೆ.

ಪ್ರತಿನಿತ್ಯ ಪ್ರಾರ್ಥನೆ ಮಾಡಿದ ನಂತರ ಚಿಂತನೆಗಳನ್ನು ಮಕ್ಕಳಿಗೆ ಅರ್ಥೈಸಲಾಗುತ್ತದೆ.

ನಮ್ಮ ಶಾಲೆಯಲ್ಲಿ ಸರ್ಕಾರದ ನಿಯಮದ ಪ್ರಕಾರ ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನದಡಿ ಸಿ.ಸಿ.ಇ ಪದ್ಧತಿಯಡಿಯಲ್ಲಿ ಶಿಕ್ಷಣ ನೀಡುತ್ತಿದ್ದು, ಶಿಕ್ಷಕರು ಆಗಾಗ್ಗೆ ಇಲಾಖೆ ನೀಡುವ ತರಬೇತಿಗಳಲ್ಲಿ ತರಬೇತಿಗೊಂಡು ಕ್ರಮಬದ್ಧವಾಗಿ ಪಾಠಬೋಧನೆಯನ್ನು ಮತ್ತು ಪರೀಕ್ಷೆಗಳನ್ನು ನಡೆಸಲಾಗುತ್ತಿದೆ.

ಸರ್ಕಾರದ ಆದೇಶದಂತೆಯೇ ಅನೇಕ ಸಂಘಗಳು ಸ್ಥಾಪನೆಗೊಂಡು ಅವುಗಳಲ್ಲಿ ಸಾಂಸ್ಕೃತಿಕ, ಭಾಷಾ, ಕ್ರೀಡಾ, ಕಲಾ, ವಿಜ್ಞಾನ, ಗಣಿತ, ಇಕೋ ಕ್ಲಬ್, ಮೀನಾ ಕ್ಲಬ್, ಮಕ್ಕಳ ಹಕ್ಕುಗಳು, ಶೈಕ್ಷಣಿಕ ವೃತ್ತಿ ಮಾರ್ಗದರ್ಶನ, ಗ್ರಾಹಕ ಕ್ಲಬ್ ಮುಂತಾದ ಸಂಘಗಳು ಅಸ್ತಿತ್ವದಲ್ಲಿದ್ದು ಅನೇಕ ಪಠ್ಯ, ಸಹಪಠ್ಯ ಚಟುವಟಿಕೆಗಳನ್ನು ಪ್ರತಿ ಶುಕ್ರವಾರ ಕೊನೆಯ ಅವಧಿಯಲ್ಲಿ ಸಂಘಗಳ ಮೇಲುಸ್ತುವಾರಿಯಲ್ಲಿ ನಡೆಸಿಕೊಂಡು ಬರಲಾಗುತ್ತಿದೆ. ಇದಲ್ಲದೇ ಆಯಾ ತಿಂಗಳು ಬರುವ ಎಲ್ಲಾ ದಿನಾಚಾರಣೆಗಳು ಹಾಗೂ ಪ್ರಮುಖ ರಾಷ್ಟ್ರೀಯ ಹಬ್ಬಗಳನ್ನು ಆಚರಿಸಲಾಗುತ್ತಿದೆ.

ಶಾಲೆಯಲ್ಲಿ ಸಾಂಸ್ಕೃತಿಕ ಚಟುವಟಿಕೆಗಳಾದ ಪ್ರತಿಭಾಕಾರಂಜಿ, ಶಾಲಾ ಸಂಸತ್ ರಚನೆ ಹಾಗೂ ಕ್ರೀಡಾ ಚಟುವಟಿಕೆಗಳನ್ನು ನಡೆಸಲಾಗಿದೆ. ಅಕ್ಷರ ದಾಸೋಹ, ವಿದ್ಯಾರ್ಥಿಗಳಗೆ ಉಚಿತ ಪಠ್ಯ ಪುಸ್ತಕ, ಸಮವಸ್ತ್ರ, ಬೈಸಿಕಲ್, ಶೂ ಹಾಗೂ ಸಾಕ್ಸ್ ಇವುಗಳು ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಾಗಿದ್ದು ಇವುಗಳನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸಲಾಗಿದೆ.

ಕ್ರೀಡೆಗಳಲ್ಲಿಯೂ ಸಹ ನಮ್ಮ ಶಾಲೆಯ ವಿದ್ಯಾರ್ಥಿಗಳು ಹೋಬಳಿ ಮಟ್ಟದ ಕ್ರೀಡಾಕೂಟದಲ್ಲಿ ಸಮಗ್ರ ಪ್ರಶಸ್ತಿಯನ್ನು ಪಡೆದು ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಪ್ರಶಸ್ತಿಗಳಿಸಿದ್ದಾರೆ. ಶಿವಮೊಗ್ಗದಲ್ಲಿ ನಡೆದ ವಿಭಾಗ ಮಟ್ಟದ ಪುಟ್‌ಬಾಲ್ ಪಂದ್ಯದಲ್ಲಿ ಬಾಲಕಿಯರು ಭಾಗವಹಿಸಿದ್ದಾರೆ. ಬೆಂಗಳೂರಿನಲ್ಲಿ ನಡೆದ ವಿಭಾಗ ಮಟ್ಟದ

ಹ್ಯಾಂಡ್‌ಬಾಲ್ ಪಂದ್ಯದಲ್ಲಿ ಬಾಲಕ-ಬಾಲಕಿಯರು ಭಾಗವಹಿಸಿದ್ದರು. ಹಾಗೂ ಧಾರವಾಡದಲ್ಲಿ ನಡೆದ ರಾಜ್ಯಮಟ್ಟದ ಅಥ್ಲೆಟಿಕ್‌ನಲ್ಲಿ 10ನೇ ತರಗತಿಯ ವಿಶ್ವನಾಥ್ ಎಂಬ ವಿದ್ಯಾರ್ಥಿಯು ಉದ್ದಜಿಗಿತ ಸ್ಪರ್ಧೆಯಲ್ಲಿ ಭಾಗವಹಿಸಿದ್ದನು. ಈ ರೀತಿಯ ಕ್ರೀಡಾ ಯಶಸ್ವಿಗೆ ಸಹಕಾರಿಯಾಗಿ ನಮ್ಮ ಶಾಲೆಯ ಕ್ರೀಡಾ ಮೈದಾನವನ್ನು ಒಂದು ಮಿನಿ ಕ್ರೀಡಾಂಗಣವನ್ನಾಗಿ ಮಾರ್ಪಡಿಸಲು ಮೈದಾನವನ್ನು ಸಮತಟ್ಟು ಮಾಡಿಸಿ ಎಲ್ಲಾ ಕ್ರೀಡೆಗಳ ಅಂಕಣಗಳಿಗೆ ಬೇಕಾದ ಉತ್ತಮ ಗುಣಮಟ್ಟದ ಕಬ್ಬಿಣದ ಪೋಲ್‌ಗಳನ್ನು ಮಾಡಿಸಿ ಸರಿಸುಮಾರು 3 ಲಕ್ಷರೂಗಳನ್ನು ಶಾಸಕರ ಅನುದಾನದಲ್ಲಿ ಕ್ರೀಡಾ ಮೈದಾನಕ್ಕೆ ವ್ಯಯಿಸಿರಿತ್ತಾರೆ.

ನಮ್ಮ ಎಸ್.ಡಿ.ಎಂ.ಸಿ ಸದಸ್ಯರು ಸಹ ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಸಹಕಾರವನ್ನು ನೀಡುತ್ತಿದ್ದಾರೆ ಮಕ್ಕಳಿಗೆ ಅಕ್ಷರ ದಾಸೋಹದಡಿ ಸ್ವಚ್ಛ ಪೌಷ್ಟಿಕಾಂಶಯುಕ್ತ ಆಹಾರ [ಇಡ್ಲಿ, ಪಲಾವ್, ಮೆಂತ್ಯೆಬಾತ್, ಬಿಸಿಬೇಳೆಬಾತ್etc] ಹಾಲು ವಿತರಣೆ, ಶುದ್ಧ ಕುಡಿಯುವ ನೀರಿನ ಸರಬರಾಜು, ಕ್ರೀಡಾ ಸಮವಸ್ತ್ರ ವಿತರಣಾ ಕಾರ್ಯಕ್ರಮಗಳು ಸುಸೂತ್ರವಾಗಿ ನಡೆಯುತ್ತಿವೆ.. ನಮ್ಮ ಶಾಲೆಯಲ್ಲಿ ಹಲವಾರು ಕಾರ್ಯಕ್ರಮಗಳಿಗೆ ಎಸ್.ಡಿ.ಎಂ.ಸಿ ಅಧ್ಯಕ್ಷರು ಹಾಗೂ ಎಲ್ಲಾ ಎಸ್.ಡಿ.ಎಂ.ಸಿ ಸದಸ್ಯರು ಖುದ್ದು ಹಾಜರಿರುವ ಮೂಲಕ ಯಶಸ್ವಿಯಾಗಿ ನಡಸಿಕೊಟ್ಟಿರುತ್ತಾರೆ.

ಹಾಗೆಯೇ 2017-18ನೇ ಸಾಲಿನಲ್ಲಿ ಎಸ್.ಎಸ್,ಎಲ್,ಸಿ ಫಲಿತಾಂಶ ಇನ್ನೂ ಹೆಚ್ಚು ಉತ್ತಮ ಪಡಿಸಲು ಉಪಪ್ರಾಂಶುಪಾಲರು ಹಾಗೂ ಶಿಕ್ಷಕರು ಸಮಾಲೋಚಿಸಿ ಕೆಲವು ಯೋಜನೆಗಳನ್ನು ಕೈಗೊಳ್ಳಲಾಗಿದೆ ಅವುಗಳೆಂದರೆ-

- ❖ ವಿಶೇಷ ತರಗತಿ ತೆಗೆದುಕೊಳ್ಳುವುದು.
- ❖ ಸಂಜೆ 4-30 ರಿಂದ 5-15ರವರೆಗೆ ಗುಂಪು ಅಧ್ಯಯನ.
- ❖ Smart class ಬಳಕೆ.
- ❖ ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಲು ಪ್ರಯೋಗಗಳನ್ನು ಮಾಡಿಸುವುದು.
- ❖ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಪರಿಹಾರ ಭೋದನೆ.
- ❖ ಮಾದರಿ ಪ್ರಶ್ನೆಪತ್ರಿಕೆಗಳನ್ನು ಮಾಡಿಸುವುದು.
- ❖ ಭಾನುವಾರವೂ ತರಗತಿ ತೆಗೆದುಕೊಳ್ಳುವುದು.
- ❖ ಎಲ್ಲಾ ವಿಷಯಗಳನ್ನು ವಿಷಯ ಶಿಕ್ಷಕರು ಪರೀಕ್ಷೆಗೆ ಬರಬಹುದಾದ ಪ್ರಶ್ನೆಗಳನ್ನು ಸತತ ಅಭ್ಯಾಸ ಮಾಡಿಸುವುದು.
- ❖ ಮುಖ್ಯವಾಗಿ 3-4 ಶಿಕ್ಷಕರು ಜೊತೆಗೂಡಿ ತಂಡಗಳನ್ನುಮಾಡಿಕೊಂಡು 10ನೇ ತರಗತಿ ಯಲ್ಲಿರುವ ವಿದ್ಯಾರ್ಥಿಗಳ ಮನೆಗಳಿಗೆ ಭೇಟಿ ನೀಡಿ ಪೋಷಕರಿಗೆ ಮಕ್ಕಳಿಗೆ ಶಿಕ್ಷಕರು ಹಾಕಿಕೊಟ್ಟ ವೇಳಾಪಟ್ಟಿಯಂತೆ ಓದಿಸಬೇಕೆಂದು ತಿಳಿಸುವುದು.
- ❖ ವಿದ್ಯಾರ್ಥಿಗಳ ಪೋಷಕರಿಗೆ ರಾತ್ರಿ ಮತ್ತು ಬೆಳಗ್ಗೆ 5 ಗಂಟೆಗೆ ಪೋನ್ ಮಾಡಿ ಮಕ್ಕಳ ಅಭ್ಯಾಸದ ಬಗ್ಗೆ ವಿಚಾರಿಸುವುದು.

ಈ ಶೈಕ್ಷಣಿಕ ಕಾರ್ಯಕ್ರಮಗಳಿಗೆ ಕೂಡ ನಮ್ಮ ಶಾಲೆಯ ಎಸ್.ಡಿ.ಎಂ.ಸಿಯು ಶಿಕ್ಷಕರಿಗೆ ಬೆನ್ನೆಲುಬಾಗಿ ನಿಂತುಕೊಂಡು ಪ್ರೋತ್ಸಾಹದಾಯಕವಾಗಿ ಸಹಕಾರವನ್ನು ನೀಡುತ್ತಿದೆ. ಈ ರೀತಿಯಾಗಿ ನಮ್ಮ ಶಾಲೆಯಲ್ಲಿ ಸರ್ವಾಂಗೀಣ ಬೆಳವಣಿಗೆ ಹೊಂದುವಲ್ಲಿ ದಾಪುಗಾಲು ಇಡುತ್ತಿದೆಯೆಂದು ತಿಳಿಸಲು ಹರ್ಷಿಸುತ್ತೇವೆ.

ಉಪ ಪ್ರಾಂಶುಪಾಲರು 31/8/2017

ಸ॥ಪ॥ಪೂ॥ ಕಾಲೇಜು(ಪ್ರೌ.ಶಾ.)

ನಾಗವಲ್ಲಿ-572 118.

ತುಮಕೂರು ತಾ॥ & ಜಿಲ್ಲೆ.

## ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ) ನಾಗವಲ್ಲಿ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ



ಶಾಲೆಯ ಹೊರನೋಟದ ದೃಶ್ಯ



# ಉಪಪ್ರಾಂಶುಪಾಲರ ಕೊಠಡಿ




# ಬೋಧಕ ಮತ್ತು ಬೋಧಕೇತರ ವೃಂದ



# ಗ್ರಂಥಾಲಯ ಸದ್ಬಳಕೆ



ಶಿಕ್ಷಕರು ಶಾಲಾ ಅವಧಿಯ ಮೊದಲು ಮತ್ತು ನಂತರದ ಅವಧಿಗಳಲ್ಲಿ ಹಾಗೂ ಪ್ರತಿ ತರಗತಿಗಳಿಗೆ ವಾರಕ್ಕೆರಡು ಅವಧಿಗಳನ್ನು ನಿಗದಿಪಡಿಸಿ ಮಕ್ಕಳ ಅಸಕ್ತಿಯನ್ನು ಪ್ರೇರೇಪಿಸಿ ಪುಸ್ತಕ ಓದಲು ಅವಕಾಶ ನೀಡಲಾಗಿ ಗ್ರಂಥಾಲಯದ ಸದ್ಬಳಕೆ ಮಾಡಲಾಗುತ್ತಿದೆ.

25 ವಿಧದ ನಿಯತಕಾಲಿಕೆಗಳನ್ನು ಖರೀದಿಸಿ ಪ್ರತ್ಯೇಕ ಅಂಕಣಗಳಲ್ಲಿ ಹಾಗೂ 5 ಕನ್ನಡ ಭಾಷಾ, 2 ಇಂಗ್ಲೀಷ್ ಭಾಷಾ, 1 ಹಿಂದಿ ಭಾಷಾ ದಿನ ಪತ್ರಿಕೆಗಳನ್ನು ಇಡಲಾಗುತ್ತಿದೆ.



# ಗಣಕಯಂತ್ರದ ಬಳಕೆಯ ಅಭ್ಯಾಸದ ತರಗತಿ



ಶಿಕ್ಷಕರ ಮಾರ್ಗದರ್ಶನದೊಂದಿಗೆ ಗಣಕಯಂತ್ರದ ಬಳಕೆಯ ಅಭ್ಯಾಸ ಮಾಡುತ್ತಿರುವುದು



# ಪ್ರಯೋಗಾಲಯದ ಸದ್ಬಳಕೆ



ಮಕ್ಕಳು "ಮಾಡಿಕಲಿ" ತತ್ವದಡಿಯಲ್ಲಿ ಪ್ರಯೋಗಾಲದಲ್ಲಿ ಪ್ರಯೋಗ ಮಡುವ ಮೂಲಕ ಅರ್ಥೈಸಿಕೊಳ್ಳುವುದು.



## ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ) ನಾಗವಲ್ಲಿ, ತುಮಕೂರು ತಾಲ್ಲೂಕು ಮತ್ತು ಜಿಲ್ಲೆ



ದಿನಾಂಕ 28–02–2017 ರಂದು ವಿಜ್ಞಾನ ವಸ್ತು ಪ್ರದರ್ಶನ ಹಾಗೂ ಪ್ರಯೋಗಗಳ ಪ್ರಾತ್ಯಕ್ಷತೆಗಳನ್ನು ಏರ್ಪಡಿಸಿರುವುದು.



## ಹೆಣ್ಣು ಮಕ್ಕಳಿಗಾಗಿ ಕಸೂತಿ ಕಲೆ



## ಹೆಣ್ಣು ಮಕ್ಕಳಿಗಾಗಿ ಕಸೂತಿ ಕಲೆ




ಸ್ಮಾರ್ಟ್ ತರಗತಿ ನಿರ್ವಹಣೆ
ಸರ್ಕಾರಿ ಪದವಿ ಪೂರ್ವ ಕಾಲೇಜು (ಪ್ರೌಢಶಾಲಾ ವಿಭಾಗ) ನಾಗವಲ್ಲಿ,
ತುಮಕೂರು ತಾಲ್ಲೂಕು ಮತ್ತು ಜಿಲ್ಲೆ